### ಸ್ಫೂರ್ತಿ ಕಥನ

‘ಜಗಮೊಂಡ ಇಶಾನ್ ದಾಖಲೆಗಳ ಶಾನ್’ (ಡಿ.29, ವಿಶಾಖ ಎನ್.) ಲೇಖನ ಸ್ಫೂರ್ತಿದಾಯಕವಾಗಿದೆ. ಚಿಕ್ಕ ವಯಸ್ಸಿನಿಂದಲೇ ಹಟ ತೊಟ್ಟು ಕ್ರಿಕೆಟ್ ಕ್ರೀಡೆಯಲ್ಲಿ ಸಾಧನೆ ತೋರುತ್ತಿರುವ ಇಶಾನ್ ಕಿಶನ್ ಕುರಿತ ಪರಿಚಯ ಸ್ಫೂರ್ತಿದಾಯಕವಾಗಿದೆ. ಅವರು ಇನ್ನಷ್ಟು ಎತ್ತರಕ್ಕೆ ಬೆಳೆಯಲಿ.

—ನಾಗರಾಜ ಎಸ್., ಹುಬ್ಬಳ್ಳಿ

### ಮನಮುಟ್ಟಿದ ಲೇಖನ

‘ಪತ್ನಿ ತಾನೇ ಮೊದಲ ಗುರು’ (ಡಿ.29, ಸ್ವಯಂಪ್ರಭಾ) ‘ಪಾಲನೆ ಪೋಷಣೆ’ ಲೇಖನ ಮನಸ್ಸಿಗೆ ನಾಟುವಂತಿತ್ತು. ನನ್ನ ಮಗಳನ್ನು ನಾನೇ ಸಂಭಾಳಿಸುವುದು. ತಂದೆಗೆ ಮಗಳೆಂದರೆ ತುಂಬಾ ಪ್ರೀತಿ. ತಂದೆಗೂ ಮಕ್ಕಳ ಜೊತೆಗಿನ ಕ್ಷಣಗಳನ್ನು ಆಪ್ತವಾಗಿ ಅನುಭವಿಸುವ ಬಗ್ಗೆ ಅವರಿಗೆ ತಿಳಿಹೇಳಲು ಪ್ರೇರಣೆ ನೀಡಿತು ಈ ಲೇಖನ.

– ಪೂಜಾ ನಾರಾಯಣ ಬಿ., ಬಾಗಲಕೋಟೆ

### ಮರಗಳ ಕಥೆಯ ಪ್ರಕೃತಿ ಪಾಠ

‘ಗಿಳಿಗಳಿಗೆ ಮಡಿಲು ಕಾಡುಬೆಳಲ’ (ಡಿ.29, ವಿನು ಗಂಗೆ) ಮರಗಳ ಕಥೆಯ ಲೇಖನ ಉತ್ತಮವಾಗಿದೆ. ಪ್ರಕೃತಿಯಲ್ಲಿನ ಪ್ರತಿಯೊಂದು ಸಸ್ಯಗಳೂ ಜೀವಿಗಳಿಗೆ ಒಂದಲ್ಲ ಒಂದು ರೀತಿ ಉಪಯುಕ್ತ ಎಂಬುದು ನಿತ್ಯ ಸತ್ಯ. ಇದನ್ನು ಲೇಖನ ಮತ್ತೆ ಮನಗಾಣಿಸಿದೆ. ಮನುಷ್ಯ ತನ್ನ ಸ್ವಾರ್ಥ ಮರೆತು ಗಿಡ ಮರಗಳನ್ನು ಬೆಳೆಸಬೇಕಿದೆ.

—ಸುರೇಶ್ ಕುಲಕರ್ಣಿ, ಮೈಸೂರು

### ಸರಳ ಸುಂದರ ಕಥೆ

‘ಸಿಐಡಿ ಇನ್ಸ್‌ಪೆಕ್ಟರ್’ (ಡಿ.29, ಜಿ.ವಿ. ಅರುಣ) ಕಥೆ ತುಂಬಾ ಚೆನ್ನಾಗಿದೆ. ಸರಳ ವಿಷಯವನ್ನು ಲೇಖಕಿ ಸುಂದರವಾಗಿ ನಿರೂಪಣೆ ಮಾಡಿದ್ದಾರೆ. ಪ್ರೇಮಕಥೆ ನವಿರಾಗಿ ಮೂಡಿಬಂದಿದೆ.

—ನಾಗವೇಣಿ, ಬೆಂಗಳೂರು



### ವಿದಾಯದ ನೋವು-ನಲಿವು

‘ವಿದಾಯ ಹೇಳುವ ಮುನ್ನ’ (ಡಿ.29, ಕಾವ್ಯಶ್ರೀ, ಮಹತಿ, ವಿ.ಆರ್) ಲೇಖನ 2022ರಲ್ಲಿ ನಡೆದ ಘಟನಾವಳಿಗಳನ್ನು ಮೆಲುಕು ಹಾಕಿಸಿತು. ಶೀರ್ಷಿಕೆ, ಮುಖಪುಟವೂ ಭಾವನಾತ್ಮಕವಾಗಿವೆ. ಈ ವರ್ಷದಲ್ಲಿ ಅಂತರರಾಷ್ಟ್ರೀಯ, ರಾಷ್ಟ್ರೀಯ ಹಾಗೂ ರಾಜ್ಯದಲ್ಲಿ ನಡೆದ ಬಹುಮುಖ್ಯ ಘಟನೆಗಳನ್ನು ಮತ್ತೆ ನಮ್ಮ ಕಣ್ಣೆದುರು ತಂದಿತು.

—ಸುಧನ್ವಾ, ದಾವಣಗೆರೆ

### ವರ್ಷದ ಹೂರಣ

‘ವಿದಾಯ ಹೇಳುವ ಮುನ್ನ’ ಲೇಖನ ವರ್ಷದ ಮಂಥನವಾಗಿದೆ. ಕೊರೊನಾ ಭಯ ಕರಗಿದ ಬೆನ್ನಲ್ಲೇ ನಡೆದ ಹಲವು ಸಂಗತಿಗಳಲ್ಲಿ ಕೆಲವು ಆಶಾಕಿರಣದಂತಿದ್ದರೆ, ಮತ್ತೆ ಕೆಲವು ನಿರಾಶಾದಾಯಕವಾಗಿದ್ದವು. ಈ ಎಲ್ಲವುಗಳ ವರ್ಷದ ಹೂರಣವನ್ನು ಲೇಖನ ಸರಳವಾಗಿ ತೆರೆದಿಟ್ಟಿದೆ.

—ಪರಿಣಿಯಾ, ಬೇಲೂರು

### ಅಡಿಕೆ ಕೃಷಿಕರಿಗೆ ಉಪಯುಕ್ತ ಮಾಹಿತಿ



‘ಅಡಿಕೆ ಬಣ್ಣ, ಬಟ್ಟೆಗೆ ಮಾನ’ (ಡಿ. 29, ನಾ. ಕಾರಂತ ಪೆರಾಜೆ) ಲೇಖನ ಮಾಹಿತಿಪೂರ್ಣವಾಗಿದೆ. ಅಡಿಕೆ ಕೃಷಿಕರಿಗೆ ಬಹಳ ಉಪಯುಕ್ತ ಸಂಗತಿ ಇದಾಗಿದ್ದು, ಅಡಿಕೆ ಚೊಗರಿನ ಮಹತ್ವವನ್ನು ಸಾರಿದೆ. ಅಡಿಕೆ ಬೆಳೆಗಾರರಿಗೆ ಆರ್ಥಿಕವಾಗಿ ಬಹು ಉಪಯೋಗಕಾರಿಯಾಗುವ ಲಕ್ಷಣಗಳೂ ಕಾಣುತ್ತಿವೆ. ಆದರೆ ಈ ಬಗ್ಗೆ ಗಂಭೀರ ಪ್ರಯತ್ನಗಳು ನಡೆಯಬೇಕಿವೆ.

– ಕೃಷ್ಣಾ, ಶಿವಮೊಗ್ಗ

### ದೌರ್ಜನ್ಯಗಳಿಗೆ ಹಿಡಿದ ಕನ್ನಡಿ

ಡಿ.29ರ ‘ನಿಮ್ಮೊಡನೆ’ ಅಂಕಣ ಸಮಾಜದಲ್ಲಿ ಹೆಣ್ಣಿನ ಮೇಲೆ ಆಗುತ್ತಿರುವ ಭಿನ್ನ ದೌರ್ಜನ್ಯಗಳ ಕನ್ನಡಿಯಂತಿದೆ. ಲಿಂಗ ಸಮಾನತೆ, ಮಹಿಳಾ ಸಬಲೀಕರಣದ ಮಾತು ಮತ್ತೆ ಮತ್ತೆ ಕೇಳಿಬರುತ್ತಿದ್ದರೂ ನಿಜ ಅರ್ಥದಲ್ಲಿ ಅದು ಸಾಕಾರವಾಗಬೇಕಿರುವುದನ್ನು ಒತ್ತಿಹೇಳಿದೆ.

– ಸುಮಧುರಾ, ಹೊನ್ನಾವರ

### ವೈವಿಧ್ಯ ವಿಷಯಗಳ ಗುಚ್ಛ

‘ನಿಮ್ಮ ಪುಟ’ದಲ್ಲಿನ ಲೇಖನಗಳು ಮಾಹಿತಿಯ ಗುಚ್ಛದಂತಿದ್ದು, ವೈವಿಧ್ಯದಿಂದ ಕೂಡಿದೆ. ಪ್ರತಿ ಬಾರಿಯೂ ಹೊಸ ಹೊಸ ವಿಷಯಗಳನ್ನು ಪರಿಚಯ ಮಾಡುತ್ತದೆ. ಬೇರೆ ಬೇರೆ ಊರುಗಳು, ಅಲ್ಲಿನ ವಿಶೇಷತೆಗಳು, ವಿಶೇಷ ಆಚರಣೆಗಳನ್ನು ಕಂಡಂತೆ ಆಗುತ್ತದೆ. ಅಪರೂಪದ ಸಂಗತಿಗಳನ್ನೂ ತಿಳಿಸಿಕೊಡುತ್ತದೆ.

—ಗಣೇಶ ರೈ, ಮಂಗಳೂರು

### ಕಪ್ಪತ್ತಗುಡ್ಡದ ಸುತ್ತಲೂ ಹೀಗೇ...

‘ಸೀರೆ ಗದ್ದೆಗೂ ಭೂಷಣ’ (ಡಿ.22, ಗಣಪತಿ ಹಾಸ್ಪುರ) ಲೇಖನ ಗಮನ ಸೆಳೆಯಿತು. ರೈತರು ತಮ್ಮ ಬೆಳೆ ರಕ್ಷಣೆಗೆ ಹಲವಾರು ಪ್ರಯೋಗ ಮಾಡುತ್ತಲೇ ಇದ್ದಾರೆ, ಇದೇ ರೀತಿ ಗದಗ ಜಿಲ್ಲೆ ಕಪ್ಪತ್ತಗುಡ್ಡದ ಸರಹದ್ದಿನಲ್ಲಿ ಕಾಡುಮಿಕ, ಜಿಂಕೆಗಳ ಕಾಟ ತಡೆಯಲು ಹೊಲದ ಸುತ್ತಲೂ ಸೀರೆ ಬೇಲಿ ಹಾಕುವ ಪರಿಪಾಠವಿದೆ.

—ಜ್ಯೋತಿ ಗಣಪ್ಪನವರ, ಗದಗ

### ಚಿತ್ತಾಕರ್ಷಕ ವಿಯೆಟ್ನಾಂ ಪರಿಚಯ



‘ಹಾಯ್ ಹಾಯ್ ಹನಾಯ್’ (ಡಿ.29, ಡಿ.ಜಿ. ಮಲ್ಲಿಕಾರ್ಜುನ) ಪ್ರವಾಸ ಕಥನದ ನಿರೂಪಣೆ ಹಾಗೂ ಚಿತ್ರಗಳು ಚಿತ್ತಾಕರ್ಷಕವಾಗಿವೆ. ಪ್ರವಾಸ ಕಥನ, ವಿಯೆಟ್ನಾಂ ಅನ್ನು ಖುದ್ದು ಪರಿಚಯವಾಗಿಸಿತು.

—ಶ್ಯಾಮಲಾ, ಬೆಂಗಳೂರು

### ಕುತೂಹಲ ಹುಟ್ಟಿಸಿದ ಧಾರಾವಾಹಿ

ವಸುಮತಿ ಉಡುಪ ಅವರ ‘ಅಂತಃಪುರ’ ಧಾರಾವಾಹಿ ಬಹಳ ಸುಂದರವಾಗಿ ಮೂಡಿಬರುತ್ತಿದೆ. ನನ್ನ ಮೆಚ್ಚಿನ ಓದು ಎಂದು ಹೇಳಬಹುದು. ಧಾರಾವಾಹಿ ಹೀಗೇ ಕುತೂಹಲಭರಿತವಾಗಿ ಮುಂದುವರೆಯಲಿ.

– ದಿವಾಕರ, ಚಿಕ್ಕಮಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in